# ದೈವತ್ವಕ್ಕೆ ತೇರ್ಗಡೆಯಾದ ಮಾನವ

# ರತನ್ ಟಾಟಾ

■ ಎಂ.ಎಸ್. ಶ್ರೀರಾಮ್

**ರತನ್ ಟಾಟಾ ತಮ್ಮ ಸಂಪತ್ತಿನ ಕಾರಣದಿಂದಾಗಿ ಮಾತ್ರವಲ್ಲದೆ, ಅಂತಃಕರಣದಿಂದಲೂ ಜನಸಾಮಾನ್ಯರ ಗಮನಸೆಳೆದಿದ್ದರು. ವ್ಯಾಪಾರದ ಭಾಗವಾಗಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರಿಂದಾಗಿ ದೇಶದ ಗೌರವಕ್ಕೆ ಅವರು ಪಾತ್ರರು. ಆದರೆ, ರತನ್ ಟಾಟಾರನ್ನು ದೈವತ್ವಕ್ಕೆ ಏರಿಸುವ ಮುನ್ನ, ಅವರು ಮಾನವರಾಗಿದ್ದರು ಎನ್ನುವುದನ್ನು ನಾವು ಮರೆಯಬಾರದು.**



ರತನ್ ಟಾಟಾ ಅವರಿಗೆ ದೊರೆತ ಶ್ರದ್ಧಾಂಜಲಿಯ ವ್ಯಾಪಕತೆ ಯಾರಿಗೂ ಆಶ್ಚರ್ಯ ತರಿಸುವಂತಿದೆ. ಬಹುಶಃ ಇದನ್ನು ಖುದ್ದು ಟಾಟಾ ಅವರೇ ನೋಡಿದ್ದರೆ ಅವಾಕ್ಕಾಗಿಬಿಡುತ್ತಿದ್ದರೇನೋ!

ಟಾಟಾ ಅವರು ವ್ಯಾಪಾರಕ್ಕೆ ಮಾನವೀಯತೆಯನ್ನು ಲೇಪಿಸಿ, ಹೂಡಿಕೆದಾರರ ಹಿತವನ್ನಷ್ಟೇ ಪರಿಗಣಿಸದೆ ಗ್ರಾಹಕರು ಮತ್ತು ಉದ್ಯೋಗಿಗಳ ಹಿತಾಸಕ್ತಿಯನ್ನೂ ಪರಿಗಣಿಸಿದ್ದನ್ನು ಜನರು ಗುರುತಿಸಿದ್ದಾರೆ. ನೈತಿಕ ನೆಲೆಯಲ್ಲಿ ವ್ಯಾಪಾರ ಮಾಡುವುದನ್ನು ಜನ ಮೆಚ್ಚುತ್ತಾರೆ ಎನ್ನುವುದು ಇದರಿಂದ ವೇದ್ಯವಾಗಿದೆ. ಒಟ್ಟಾರೆ 'ಟಾಟಾ' ಸಮೂಹಕ್ಕೂ, ಅದನ್ನು ಪ್ರತಿನಿಧಿಸುತ್ತಿದ್ದ ರತನ್ ಟಾಟಾಗೂ ಈ ಮೆಚ್ಚುಗೆ ಮತ್ತು ಗೌರವ ಸಲ್ಲಬೇಕಾದ್ದು ಸಹಜವೂ ನ್ಯಾಯಬದ್ಧವೂ ಆಗಿದೆ.

ರತನ್ ಟಾಟಾ ಸಜ್ಜನತೆಯ ಪ್ರತೀಕವಾಗಿದ್ದರು. ಅವರಿಗೆ ದೊರೆತ ಲಕ್ಷಾಂತರ ಶ್ರದ್ಧಾಂಜಲಿಗಳಲ್ಲಿ, ಖುದ್ದು ಭೇಟಿ ಮಾಡಿದವರ ಅನುಭವಗಳು ಒಂದೆಡೆಯಾದರೆ, ಅವರನ್ನು ಭೇಟಿ ಮಾಡದಿದ್ದರೂ ಅವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿದ್ದವರ ಅನುಭವಗಳೂ ನಮಗೆ ಕಾಣುತ್ತವೆ. ಸಾರ್ವಜನಿಕ ಜೀವನದಲ್ಲಿಲ್ಲದೆಯೇ, ತೀರಾ ಸಂಕೋಚ ಸ್ವಭಾವದ ವ್ಯಕ್ತಿಯ ಮರಣ ಇಷ್ಟು ವ್ಯಾಪಕವಾಗಿ ಜನರನ್ನು ತಟ್ಟಿದೆಯೆಂದರೆ ಅದರಲ್ಲಿ ಯಾವುದೋ ಮಹತ್ವವಿರಬೇಕು. ಟಾಟಾ ಹೆಚ್ಚು ಮಾತಾಡಿದವರಲ್ಲ. ಪತ್ರಿಕೆಗಳಿಗೆ– ದೃಶ್ಯಮಾಧ್ಯಮಗಳಿಗೆ ಸಂದರ್ಶನಗಳನ್ನು ವ್ಯಾಪಕವಾಗಿ